ಸರ್ಕಾರಕ್ಕೆ ಸೇರಿದ ಭೂಮಿಯನ್ನು ರಕ್ಷಣೆ ಮಾಡುವುದು

94(361) ಶ್ರೀ ಸಿದ್ದು ಸವದಿ (ತೇರದಾಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತ ಕ್ಷೇತ್ರದಲ್ಲಿ ಒಟ್ಟು ಸರ್ಕಾರಕ್ಕೆ ಸೇರಿದ ಜಮೀನು ಎಷ್ಟು ಹಾಗೂ ಗ್ರಾಮವಾರು ವಿವರ ಒದಗಿಸುವುದು;

ಆ) ಈ ಪೈಕಿ ಈಗ ಉಳಿದ ಜಮೀನು ಎಷ್ಟು; ಒತ್ತುವರಿ ಆಗಿರುವ ಜಮೀನೆಷ್ಟು; (ಊರವಾರು ವಿವರ ನೀಡುವುದು)

ಇ) ಈಗಾಗಲೇ ಒತ್ತುವರಿಯಾಗಿರುವ ಜಮೀನಿನ ಬಗ್ಗೆ ಸರ್ಕಾರದ ನಿಲುವೇನು; ಉಳಿದಿರುವ ಭೂಮಿಯ ರಕ್ಷಣೆಯನ್ನು ಮಾಡಲು ಕೈಗೊಂಡ ಕ್ರಮವೇನು;

ಈ) ಒತ್ತುವರಿ ಆದ ಸರ್ಕಾರಿ ಜಮೀನು ಯಾವ ಯಾವ ಪ್ರಕಾರದ್ದು; ಅದರಲ್ಲಿ ಗೋಮಾಳ ಡಿಸ್ ಫಾರೆಸ್ಟ್ ಮತ್ತು ಇತರೆ ಯಾವುದಾದರು ಇದ್ದಲ್ಲಿ ಸಂಪೂರ್ಣ ವಿವರ ನೀಡುವುದು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು)

ಅ) ತೇರದಾಳ ಮತಕ್ಷೇತ್ರದಲ್ಲಿ 10,168–37 ಎ/ಗುಮ ಸರಕಾರಕ್ಕೆ ಸೇರಿದ ಜಮೀನು ಇರುತ್ತದೆ. ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ಇರಿಸಲಾಗಿದೆ.

ಆ) ಈ ಪೈಕಿ ಉಳಿದ ಜಮೀನು–10,031–24 ಎಕರೆ

ಒತ್ತುವರಿಯಾಗಿರುವ ಜಮೀನು–137–13 ಎಕರೆ

ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ಇರಿಸಿದೆ.

ಇ) ಸರಕಾರದ ಸುತ್ತೋಲೆ ಸಂಖ್ಯೆ: ಕೆಪಿಎಲ್‌ಸಿ/ಎಲ್‌ಎನ್‌ಡಿ/120/09–10 ದಿನಾಂಕ 10–2–2010 ಹಾಗೂ ಆರ್‌ಡಿ/674/ಎಲ್‌ಜಿಬಿ/2008, ದಿನಾಂಕ 8–9–2008ರ ಪ್ರಕಾರ ಸರ್ಕಾರದ ಒತ್ತುವರಿ ಜಮೀನುಗಳನ್ನು ತೆರವುಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ.

ಈ) ಒತ್ತುವರಿ ಆದ ಸಂಪೂರ್ಣ ಸರ್ಕಾರಿ ಜಮೀನು ಗಾಯರಾಣ ಜಮೀನು ಆಗಿರುತ್ತದೆ.

ಅನುಬಂಧ

ತೇರದಾಳ ಮತ ಕ್ಷೇತ್ರದಲ್ಲಿ ಸರಕಾರಿ ಜಮೀನುಗಳ ಹಾಗೂ ಒತ್ತುವರಿಯಾದ ಜಮೀನುಗಳ ವಿವರ

ಅ. ಸಂ.	ತಾಲ್ಲೂಕು	ಗ್ರಾಮ	ಸರಕಾರಕ್ಕೆ ಸೇರಿದ ಜಮೀನುಗಳ ವಿವರ	ಆ ಪೈಕಿ ಈಗ ಉಳಿದ ಜಮೀನಿನ ವಿವರ	ಒತ್ತುವರಿ ಆದ ಜಮೀನುಗಳ ವಿವರ
1	2	3	4	5	6
1	ಜಮಖಂಡಿ	ಸಸಾಲಟ್ಟಿ	18–14	18–14	–
		ಹಿಪ್ಪರಗಿ	27–18	27–18	–
		ಸಾವಲಗಿ	32–15	32–15	–
		ಬನಹಟ್ಟಿ	198–33	198–33	–
		ಬಂಡಿಗಣಿ	745–24	745–24	–
		ಚಿಮ್ಮಡ	31–02	31–02	–
		ಮದನಮಟ್ಟಿ	218–38	218–38	–
		ಮದರಖಂಡಿ	1052–35	1052–35	–
		ಯಲ್ಲಟ್ಟಿ	122–32	122–32	–
		ಯರಗಟ್ಟಿ	13–10	13–10	–
		ಆಸಂಗಿ	429–21	429–21	–
		ಜಗದಾಳ	903–38	903–38	–
		ರಬಕವಿ	142–18	12–05	130–13
		ಹನಗಂಡಿ	1096–21	1096–21	–
		ಹಳಿಂಗಳಿ	340–37	340–37	–
		ಹೂಸೂರು	132–20	132–20	–
		ಕಲ್ಹಳ್ಳಿ	3529–22	3529–22	–

1	2	3	4	5	6
		ಕುಲಹಳ್ಳಿ	105–00	105–00	–
		ಕಾಲತಿಪ್ಪಿ	43–00	43–00	–
		ಗೋಲಬಾವಿ	108–22	108–22	–
		ತೇರದಾಳ	776–02	776–02	–
2	ಮುಧೋಳ	ಮಹಾಲಿಂಗಪೂರ	77–24	70–24	07–00
		ಕೇಸರಕೊಪ್ಪ	01–16	01–16	–
		ಮದಬಾವಿ	05–15	15–00	–
		ಮಾರಾಪೂರ	15–00	15–00	–
		ಒಟ್ಟು	**10,168–37**	**10,031–24**	**137–13**

ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆ ಆದ ಹಿಪ್ಪರಗಿ ಸೇತುವೆ ಪುನರ್ ನಿರ್ಮಾಣ

96(363) ಶ್ರೀ ಸಿದ್ದು ಸವದಿ (ತೇರದಾಳ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಪ್ಪರಗಿ ಬಂದಾರ ಕೆಳಗಡೆ ಇರುವ ಜಮಖಂಡಿ ಮತ್ತು ಅಥಣಿ ತಾಲ್ಲೂಕನ್ನು ಜೋಡಿಸುವ ಸಂಪರ್ಕ ಸೇತುವೆ ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆ ಆಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪರ್ಯಾಯವಾಗಿ ಹಿಪ್ಪರಗಿ ಬಾಂದಾರಿನ ರಸ್ತೆಯನ್ನೇ ಉಪಯೋಗಿಸುತ್ತಿರುವುದರಿಂದ ಹಿಪ್ಪರಗಿ ಜಲಾಶಯಕ್ಕೆ ಭದ್ರತೆಯ ಭೀತಿ ಎದುರಾಗುವುದಿಲ್ಲವೇ;

ಇ) ಹಾಗಿದ್ದಲ್ಲಿ, ಮುಳುಗಡೆ ಆದ ಸ್ಥಳದಲ್ಲಿ ಅಥವಾ ಸೂಕ್ತವಾದ ಇನ್ನೊಂದು ಕಡೆ ಸೇತುವೆ ನಿರ್ಮಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ;

ಈ) ಹಾಗಾದಲ್ಲಿ ಯಾವಾಗ ಪ್ರಾರಂಭವಾಗುವುದು; ಅಲ್ಲಿಯವರೆಗೆ ಪರ್ಯಾಯವಾಗಿ ಸೇತುವೆ ನಿರ್ಮಿಸಲಾಗುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)